ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೦೩**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತಮೂರನೇ ಅಧಿವೇಶನ**

**ಗುರುವಾರ, ದಿನಾಂಕ ೦೯ನೇ ಫೆಬ್ರವರಿ, ೨೦೧೭**

---

**ಸಮೂಹ – IV**

೧. ಮುಖ್ಯಮಂತ್ರಿಗಳು

೨. ಗೃಹ ಸಚಿವರು

೩. ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು

೪. ನಗರಾಭಿವೃದ್ಧಿ ಹಾಗೂ ಹಜ್ ಸಚಿವರು

---

## ಕೆಂಪೇಗೌಡ ಬಡಾವಣೆಯ ನಿರ್ಮಾಣ ಹಂತ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೩೧(೨೯) ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣ ಯಾವ ಹಂತದಲ್ಲಿದೆ; ಸದರಿ ಬಡಾವಣೆಯಲ್ಲಿ ಸಾರ್ವಜನಿಕರಿಗೆ ಹಂಚಿಕೆ ಮಾಡಲು ಉದ್ದೇಶಿಸಿರುವ ನಿವೇಶನಗಳ ಸಂಖ್ಯೆ ಎಷ್ಟು; (ಅಳತೆವಾರು ಪ್ರತ್ಯೇಕ ವಿವರ ನೀಡುವುದು)

(ಆ) ವಿವಿಧ ಅಳತೆಯ ಎಷ್ಟು ನಿವೇಶನಗಳನ್ನು ಹಂಚಲಾಗುವುದು; ಈಗಾಗಲೇ ನಿವೇಶನಕ್ಕಾಗಿ ಸಾರ್ವಜನಿಕರಿಂದ ಸಂಗ್ರಹವಾದ ಹಣವೆಷ್ಟು; (ವಿವಿಧ ಅಳತೆವಾರು ಸಂಗ್ರಹವಾದ ಹಣದ ವಿವರ ನೀಡುವುದು)

(ಇ) ಹಾಗಿದ್ದಲ್ಲಿ, ನಿವೇಶನಗಳನ್ನು ಯಾವಾಗ ಹಂಚಿಕೆ ಮಾಡಲಾಗುವುದು; ನಿವೇಶನ ಹಂಚಿಕೆಯಾಗದವರಿಗೆ ಹಣವನ್ನು ಹಿಂತಿರುಗಿಸಲಾಗುವುದು ಯಾವಾಗ;

(ಈ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ೨೦೧೪ ರಿಂದ ಇಲ್ಲಿಯವರೆವಿಗೂ ಬೋರ್ಡ್ ಮೀಟಿಂಗ್‌ನ್ನು ಎಷ್ಟು ಬಾರಿ ನಡೆಸಲಾಯಿತು; ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳು ಯಾವುವು?

## ನೀರು ಸರಬರಾಜು ಮಂಡಳಿಗೆ ಬರಬೇಕಾಗಿರುವ ಬಾಕಿ ಬಗ್ಗೆ

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೨ (೨೪೧) ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ೨೦೧೬–೧೭ನೇ ಸಾಲಿನಲ್ಲಿ ಸರ್ಕಾರಿ ಕಛೇರಿಗಳು/ವಸತಿ/ ಗೃಹಗಳಿಂದ ನೀರು ಸರಬರಾಜು ಮಂಡಳಿಗೆ ಬರಬೇಕಾಗಿರುವ ಒಟ್ಟು ಮೊತ್ತವೆಷ್ಟು;

(ಆ) ಅದರಲ್ಲಿ ಸಂದಾಯವಾಗಿರುವ ಮೊತ್ತವೆಷ್ಟು; ಈಗಿನ ಬಾಕಿ ಎಷ್ಟು ಮತ್ತು ಹಿಂದಿನ ಬಾಕಿ ಎಷ್ಟು;

(ಇ) ಕಾಲಕಾಲಕ್ಕೆ ನೀರಿನ ಶುಲ್ಕ ಪಾವತಿಸದೆ ಇರುವ ಸರ್ಕಾರಿ ಕಛೇರಿಗಳು/ ವಸತಿ ಗೃಹಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ;

(ಈ) ಅನಧಿಕೃತ ಸಂಪರ್ಕಗಳ ವಿರುದ್ಧ ಮಂಡಳಿಯು ಕೈಗೊಂಡಿರುವ ಕ್ರಮಗಳೇನು;

(ಉ) ನೀರಿನ ಸದ್ಬಳಕೆಯ ಬಗ್ಗೆ ಸಾರ್ವಜನಿಕರಲ್ಲಿ ಅರಿವನ್ನುಂಟು ಮಾಡಲು ಕೈಗೊಂಡಿರುವ ಕ್ರಮಗಳೇನು?

## ರಾಜ್ಯದ ಇತರೆ ನಗರಗಳಲ್ಲಿ ಮಾದಕ ವಸ್ತುಗಳ ಹಾವಳಿ ಹೆಚ್ಚಾಗುತ್ತಿರುವ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೩೩ (೨೪೬) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು, ಮಂಗಳೂರು, ಮೈಸೂರು, ಮಣಿಪಾಲ ಮತ್ತು ರಾಜ್ಯದ ಇತರೆ ನಗರಗಳಲ್ಲಿ ಮಾದಕ ವಸ್ತುಗಳ ಹಾವಳಿ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಕಳೆದ ೩ ತಿಂಗಳಲ್ಲಿ ವಿಭಾಗವಾರು ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು;

(ಇ) ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಎಷ್ಟು ಆರೋಪಿಗಳನ್ನು ಬಂಧಿಸಲಾಗಿದೆ;

(ಈ) ಈ ಮಾದಕ ವಸ್ತುಗಳ ಹಾವಳಿಯನ್ನು ತಡೆಗಟ್ಟಲು ಸರ್ಕಾರ ಪರಿಣಾಮಕಾರಿ ಕ್ರಮ ಜರುಗಿಸಲು ಏನು ಯೋಜನೆ ಹಾಕಿಕೊಂಡಿದೆ?

## ವಿದ್ಯುತ್ ಚಾಲಿತ ಮಗ್ಗಗಳನ್ನು ಸ್ಥಗಿತಗೊಳಿಸುತ್ತಿರುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) –**

೩೪ (೨೮೬) ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಚಾಲನೆಯಲ್ಲಿರುವ ವಿದ್ಯುತ್ ಮಗ್ಗಗಳ ಕಾರ್ಯಚಟುವಟಿಕೆಗಳನ್ನು ಸ್ಥಗಿತಗೊಳಿಸುವ ಕುರಿತಾದ ಮಾನದಂಡಗಳೇನು;

(ಆ) ಪ್ರಸ್ತುತ ಚಾಲ್ತಿಯಲ್ಲಿರುವ ಸದರಿ ಮಗ್ಗಗಳು ಕಡಿಮೆ ಪ್ರಮಾಣದ ವಿದ್ಯುತ್ತನ್ನು ಬಳಸಿ, ಬಟ್ಟೆ ನೇಯುತ್ತಿದ್ದು, ಯಾವುದೇ ಮಿತಿ ಮೀರಿದ ಶಬ್ದಮಾಲಿನ್ಯವನ್ನು ಉಂಟು ಮಾಡುತ್ತಿಲ್ಲ ಎಂಬುದನ್ನು ಸರ್ಕಾರ ಗಮನಿಸಿದೆಯೇ; ಹೌದಾದಲ್ಲಿ, ಆ ಕುರಿತಾದ ವಸ್ತು ನಿಷ್ಠ ವಿವರಗಳೇನು;

(ಇ) ಕಳೆದ ೩ ವರ್ಷಗಳಲ್ಲಿ ಎಷ್ಟು ವಿದ್ಯುತ್ ಮಗ್ಗ (ಅರೆಯಾಂತ್ರಿಕ ಕೈಮಗ್ಗಗಳು) ಗಳ ಕಾರ್ಯಚಟುವಟಿಕೆಗಳನ್ನು ಸೀಜ್ ಮಾಡಲಾಗಿದೆ; ನೂರಾರು ವರ್ಷಗಳಿಂದಲೂ ಕೆಲವೊಂದು ಪ್ರದೇಶಗಳಲ್ಲಿ ವಸ್ತ್ರೋದ್ಯಮದಲ್ಲಿ ತೊಡಗಿರುವ ಮೂಲ ಬಡ ನೇಕಾರರನ್ನು ಶಬ್ದಮಾಲಿನ್ಯದ ನೆಪವೊಡ್ಡಿ ಬೀದಿಪಾಲು ಮಾಡುವುದನ್ನು ಕೂಡಲೇ ನಿಲ್ಲಿಸಿ, ನೇಕಾರರಿಗೆ ನ್ಯಾಯ ನೀಡಲಾಗುವುದೇ?

## ಆರ್ಯವೈಶ್ಯ ಮಹಾಸಭೆ ಚುನಾವಣೆ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) –**

೩೫ (೩೧೬) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೬ ಮೇ ೧ ರಂದು ಆರ್ಯವೈಶ್ಯ ಮಹಾಸಭಾ ಸಂಘದ ಚುನಾವಣೆ ನಡೆದಿದೆಯೇ;

(ಆ) ನಡೆದಿದ್ದರೆ, ರಿಜಿಸ್ಟ್ರರ್ ಆಫ್ ಸೊಸೈಟಿ ವತಿಯಿಂದ ನಡೆಸಲಾಯಿತೆ; ಈ ಚುನಾವಣೆಗೆ ಯಾವ ಅಧಿಕಾರಿಯನ್ನು ನೇಮಿಸಲಾಗಿತ್ತು; (ಅವರ ಸ್ಥಾನಮಾನಗಳ ವಿವರ ಹಾಗೂ ಆದೇಶದ ಪ್ರತಿ ನೀಡುವುದು)

(ಇ) ಚುನಾವಣೆ ಅಧಿಕಾರಿಯ ನೇಮಕ ಹಾಗೂ ನಂತರದ ಪ್ರಕ್ರಿಯೆಗಳು ಸಂಘದ ಬೈಲಾ ಪ್ರಕಾರ ನಡೆದಿದೆಯೇ; ಈ ಸಂಬಂಧ ಯಾವುದಾದರೂ ದೂರುಗಳು ದಾಖಲಾಗಿವೆಯೇ; ದಾಖಲಾಗಿದ್ದಲ್ಲಿ, ದೂರುಗಳ ಮೇಲೆ ಕೈಗೊಂಡ ಕ್ರಮಗಳೇನು;

(ಈ) ಚುನಾವಣಾ ಅಧಿಕಾರಿಯು ಯಾವ ಕಛೇರಿಗೆ ಸಂಬಂಧಪಟ್ಟಿದ್ದಾರೆ; (ಮಾಹಿತಿ ಹಾಗೂ ವಿವರಗಳನ್ನು ನೀಡುವುದು)

(ಉ) ಚುನಾವಣೆಗೋಸ್ಕರ ಎಷ್ಟು ಜನ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು; (ಅವರ ಬಗ್ಗೆ ಮಾಹಿತಿ ಹಾಗೂ ವಿವರಗಳನ್ನು ಒದಗಿಸುವುದು)

(ಊ) ಚುನಾವಣಾ ಅಧಿಕಾರಿಯು ಮತದಾರರ ಪಟ್ಟಿಯನ್ನು ಪರೀಕ್ಷಿಸಿ ಪ್ರಕಟಿಸಿದ್ದಾರೆಯೇ; ಪ್ರಕಟಿಸಿದ್ದಲ್ಲಿ, ಬೈಲಾ ಪ್ರಕಾರ ಇದೆಯೇ;

(ಋ) ಅಭ್ಯರ್ಥಿಗಳ ಪಟ್ಟಿ ತಯಾರಿಸುವಲ್ಲಿ ಇರುವ ಮಾನದಂಡಗಳನ್ನು ಪಾಲಿಸಲಾಗಿದೆಯೇ; ಒಟ್ಟು ಎಷ್ಟು ಮತದಾನ ಪ್ರತಿಗಳನ್ನು ಮುದ್ರಿಸಲಾಗಿತ್ತು;

(ಋ) ಚುನಾಣೆಗೆ ನಿಂತ ಅಭ್ಯರ್ಥಿಗಳ ಮೇಲೆ ಯಾವುದಾದರೂ ಅಪರಾಧ ಪ್ರಕರಣಗಳು ದಾಖಲಾಗಿವೆಯೇ; ದಾಖಲಾಗಿದ್ದಲ್ಲಿ, ಅಂತಹ ಅಭ್ಯರ್ಥಿಗಳನ್ನು ಚುನಾವಣೆಗೆ ನಿಲ್ಲಲು ಅನುಮತಿ ನೀಡಲಾಗಿತ್ತೆ; ಈ ಬಗ್ಗೆ ಯಾವುದಾದರೂ ದೂರುಗಳು ದಾಖಲಾಗಿವೆಯೇ?

## ಅನುಕಂಪ ಆಧಾರದ ಮೇಲೆ ನೇಮಕಾತಿ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) –**

೩೬ (೩೧೯) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯ ಹಣಕಾಸು ನಿಗಮ (K.S.F.C.) ದಲ್ಲಿ ಅನುಕಂಪ ಆಧಾರದ ಹುದ್ದೆಗಳನ್ನು ನೇಮಕ ಮಾಡದೆ ಸ್ಥಗಿತಗೊಳಿಸಿರುವುದು ನಿಜವೇ;

(ಆ) ಸ್ಥಗಿತಗೊಳಿಸಲು ಕಾರಣಗಳೇನು; ಯಾವ ದಿನಾಂಕದಿಂದ ಸ್ಥಗಿತಗೊಳಿಸಲಾಗಿದೆ;

(ಇ) ನಿಗಮವು ೨೦೦೧ ರಿಂದ ಇಲ್ಲಿಯವರೆಗೆ ಪ್ರತಿ ವರ್ಷ ಎಷ್ಟು ಲಾಭಗಳಿಸಿದೆ; ಈ ಲಾಭವು ನಿಗಮದ ಒಟ್ಟಾರೆ ನಷ್ಟದ ಶೇ. ೩೦ಕ್ಕಿಂತ ಕಡಿಮೆ ಇದೆಯೇ; ಅಥವಾ ಹೆಚ್ಚಿದೆಯೇ; (ವರ್ಷವಾರು ಮಾಹಿತಿಯನ್ನು ನೀಡುವುದು)

(ಈ) ನಿಗಮವು ಒಟ್ಟಾರೆ ನಷ್ಟದ ಶೇ. ೩೦ಕ್ಕಿಂತ ಹೆಚ್ಚಿಗೆ ಲಾಭವನ್ನು ಮುಂದಿನ ಯಾವ ವರ್ಷಗಳಲ್ಲಿ ಹೊಂದಬಹುದು? (ವಿವರವಾದ ಮಾಹಿತಿ ಒದಗಿಸುವುದು)

## ಗೃಹ ರಕ್ಷಕ ದಳ ಸಿಬ್ಬಂದಿ ಭತ್ಯೆ ಹಾಗೂ ಸೌಕರ್ಯಗಳ ಕುರಿತು

**ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೭ (೨೬೦) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಗೃಹ ರಕ್ಷಕ ದಳದ ಸಿಬ್ಬಂದಿಗೆ ಹಾಲಿ ನೀಡುತ್ತಿರುವ ದಿನಭತ್ಯೆ ರೂ. ೩೦೦–೦೦ ಗಳಿಂದ ೫೦೦–೦೦ ಗಳಿಗೆ ಏರಿಕೆ ಮಾಡುವ ಪ್ರಸ್ತಾವನೆ ಇದೆಯೇ;

(ಆ) ರಾಜ್ಯದಲ್ಲಿ ಗೃಹ ರಕ್ಷಕ ದಳದ ಸಿಬ್ಬಂದಿಯನ್ನು ದೊಂಬಿ, ಗಲಾಟೆ, ಮುಷ್ಕರ ಹಾಗೂ ಸಂಚಾರಿ ವ್ಯವಸ್ಥೆಗಳನ್ನು ನಿಯಂತ್ರಿಸುವ ಸಂದರ್ಭದಲ್ಲಿ ನಿಯೋಜನೆ ಮಾಡಲಾಗುತ್ತದೆ ಹಾಗೂ ರಾಜ್ಯ ಪೋಲೀಸರ ಕರ್ತವ್ಯದ ಸಮನಾಗಿ ಗೃಹ ರಕ್ಷಕ ದಳದ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ,

ಸದರಿ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುವ ಸಮಯದಲ್ಲಿ ಸಾವು ನೋವು ಸಂಭವಿಸಿದಾಗ ಸರ್ಕಾರದಿಂದ ಅವರ ಅವಲಂಬಿತ ಕುಟುಂಬಗಳಿಗೆ ಸರ್ಕಾರಿ ನೌಕರಿ ಹಾಗೂ ಹಣಕಾಸಿನ ಸೌಲಭ್ಯ ನೀಡಲಾಗುತ್ತಿದೆಯೇ;

(ಇ) ರಾಜ್ಯ ಗೃಹ ರಕ್ಷಕ ದಳದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ಜೇಷ್ಠತೆಯನ್ನು ಪರಿಗಣಿಸಿ, ಪೊಲೀಸ್ ಇಲಾಖೆ ಸಿಬ್ಬಂದಿಗಳ ನೇಮಕಾತಿಯಲ್ಲಿ ಹಾಗೂ ಇನ್ನಿತರ ರಾಜ್ಯ ಸರ್ಕಾರಿ ನೇಮಕಾತಿಗಳಲ್ಲಿ ಮೀಸಲಾತಿಯನ್ನು ನೀಡಬಹುದಲ್ಲವೆ;

(ಈ) ಗೃಹ ರಕ್ಷಕ ದಳದ ಸಿಬ್ಬಂದಿ ವಾರದ ಪೆರೇಡ್‌ನಲ್ಲಿ ಭಾಗವಹಿಸಿದವರಿಗೆ ಕವಾಯಿತು ಭತ್ಯೆ ರೂ. ೨೨–೦೦ ಗಳನ್ನು ಮಾತ್ರ ನೀಡುವುದರಿಂದ ಇದು ಅತ್ಯಂತ ಕಡಿಮೆ ಇದ್ದು, ಸದರಿ ಭತ್ಯೆಯನ್ನು ಏರಿಕೆ ಮಾಡುವ ಪ್ರಸ್ತಾಪ ಸರ್ಕಾರದ ಹಂತದಲ್ಲಿದೆಯೇ?

## ೨೦೧೩ ರಿಂದ ವಿಜಯಪುರ ಮಹಾನಗರ ಪಾಲಿಕೆ ಅನುದಾನದ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೮ (೨೨೭) ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೩ ರಿಂದ ವಿಜಯಪುರ ಮಹಾನಗರ ಪಾಲಿಕೆಗೆ ಯಾವ ಯಾವ ಯೋಜನೆಗಳಡಿ ಎಷ್ಟು ಅನುದಾನ ಮಂಜೂರಾಗಿದೆ; (ವರ್ಷವಾರು ವಿವರವಾದ ಮಾಹಿತಿ ನೀಡುವುದು)

(ಆ) ಮಂಜೂರಾದ ಅನುದಾನಗಳಲ್ಲಿ ಪಾಲಿಕೆಯಿಂದ ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಹಣ ಖರ್ಚಾಗಿದೆ; ಉಳಿದ ಹಣ ಎಷ್ಟು; (ಕಾಮಗಾರಿವಾರು ವಿವರವಾದ ಮಾಹಿತಿ ನೀಡುವುದು)

(ಇ) ನಗರದ ಗುಂಟಾ ಪ್ಲಾಟ್‌ಗಳಿಂದ ಪಾಲಿಕೆಗೆ ಯಾವುದೇ ಆದಾಯವಿರದಿದ್ದರೂ, ಆದಾಯವಿರತಕ್ಕ ಬಡಾವಣೆಗಳಿಗಿಂತ ಹೆಚ್ಚು ಸಿ.ಸಿ. ರಸ್ತೆ, ಒಳಚರಂಡಿ, ವಿದ್ಯುತ್ ದೀಪಗಳನ್ನು ಖಾಸಗಿಯವರ ಒತ್ತಡಕ್ಕೆ

ಮಣಿದು ಗುಂಟಾ ಜಾಗಗಳಲ್ಲಿ ಕಾಮಗಾರಿಗಳನ್ನು ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಈ) ಕೆಲವು ಸದಸ್ಯರು ಪಾಲಿಕೆಯ ಅನುದಾನವನ್ನು ತಮ್ಮ ಸ್ವಂತ ಖಾಸಗಿ ಜಾಗಗಳಿಗೆ ಬಳಕೆ ಮಾಡಲಾಗಿದೆ ಎಂಬ ಗಂಭೀರ ಆರೋಪವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸರ್ಕಾರವು ತೆಗೆದುಕೊಂಡ ದಿಟ್ಟ ಕ್ರಮಗಳೇನು? (ವಿವರವಾದ ಮಾಹಿತಿ ನೀಡುವುದು)

## ಕಡತ ವಿಲೇವಾರಿ ವಿಳಂಬದಿಂದಾಗಿ ಸರ್ಕಾರಿ ಯೋಜನೆಗಳು ಫಲಾನುಭವಿಗಳಿಗೆ ಸಕಾಲದಲ್ಲಿ ದೊರೆಯದೇ ಇರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೯ (೨೯೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಸರ್ಕಾರಿ ಇಲಾಖೆಗಳಲ್ಲಿ ಸಚಿವಾಲಯಗಳೂ ಸೇರಿದಂತೆ ಅನೇಕ ಇಲಾಖೆಗಳಲ್ಲಿ ಕಡತ ವಿಲೇವಾರಿಯು ತ್ವರಿತಗತಿಯಲ್ಲಿ ನಡೆಯದೇ, ಸರ್ಕಾರದ ಯೋಜನೆಗಳ ಫಲಗಳು ಜನ ಸಾಮಾನ್ಯರಿಗೆ ತಲುಪಲು ವಿಳಂಬವಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಸಚಿವಾಲಯ ಮತ್ತು ಸಂಬಂಧಿಸಿದ ಇಲಾಖೆಗಳಲ್ಲಿ ವಿಲೇವಾರಿಯಾಗದೆ ಬಾಕಿ ಉಳಿದಿರುವ ಕಡತಗಳೆಷ್ಟು; (ಇಲಾಖಾವಾರು ಮಾಹಿತಿ ಒದಗಿಸುವುದು)

(ಇ) ಇಲಾಖೆಗಳಲ್ಲಿ ಕಡತಗಳು ತ್ವರಿತವಾಗಿ ವಿಲೇವಾರಿಯಾಗದೆ ಇರುವುದಕ್ಕೆ ಕಾರಣಗಳೇನು;

(ಈ) ಕಡತಗಳು ತ್ವರಿತವಾಗಿ ವಿಲೇವಾರಿಯಾಗಿ ಯೋಜನೆಗಳು ಜನಸಾಮಾನ್ಯರನ್ನು ತಲುಪುವಂತೆ ಮಾಡಲು ಸರ್ಕಾರವು ಏನು ಕ್ರಮಗಳನ್ನು ತೆಗೆದುಕೊಳ್ಳಲಿದೆ; ವಿಳಂಬ ಮಾಡುವ ತಪ್ಪಿತಸ್ಥ ಸಿಬ್ಬಂದಿಗಳ ವಿರುದ್ಧ ಏನು ಶಿಸ್ತು ಕ್ರಮ ಕೈಗೊಳ್ಳಲಾಗುವುದು? (ವಿವರ ನೀಡುವುದು)

## ಸೊಳ್ಳೆಗಳ ನಿಯಂತ್ರಣ ನೆಪದಲ್ಲಿ ಹಣ ದುರ್ಬಳಕೆ

**ಡಾ. ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) –**

೪೦ (೨೭೬) ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸೊಳ್ಳೆಗಳ ನಿಯಂತ್ರಣಕ್ಕಾಗಿ ಫಾಗಿಂಗ್ ಮಾಡಲು ಕಳೆದ ೩ ವರ್ಷಗಳಲ್ಲಿ ಮೀಸಲಿಟ್ಟಿದ್ದ ಮತ್ತು ಖರ್ಚು ಮಾಡಿದ ಹಣವೆಷ್ಟು;

(ಆ) ಈ ಫಾಗಿಂಗ್ ಮಾಡುವ ಕಾರ್ಯವನ್ನು ಪಾಲಿಕೆ ವತಿಯಿಂದ ನಿರ್ವಹಿಸಲಾಗಿದೆಯೇ; ಅಥವಾ ಖಾಸಗಿ ಏಜೆನ್ಸಿಯಿಂದ ನಿರ್ವಹಿಸಲಾಗುವುದೇ; ಈ ಫಾಗಿಂಗ್ ಕಾರ್ಯವನ್ನು ಬಡಾವಣೆವಾರು ಎಷ್ಟು ದಿನಕ್ಕೊಮ್ಮೆ ಮಾಡುವ ವ್ಯವಸ್ಥೆ ಇದೆ;

(ಇ) ಪಾಲಿಕೆಯ ಅಧಿಕಾರಿಗಳು/ಸಿಬ್ಬಂದಿಗಳು/ಏಜೆನ್ಸಿಯವರು ಪರಿಣಾಮಕಾರಿಯಾಗಿ ಫಾಗಿಂಗ್ ಕಾರ್ಯ ಮಾಡದೆ, ಹಣ ದುರುಪಯೋಗ ಪಡಿಸಿಕೊಂಡಿದ್ದರಿಂದ, ಬೆಂಗಳೂರು ನಗರಾದ್ಯಂತ ಡೆಂಗ್ಯೂ, ಚಿಕನ್‌ಗುನ್ಯಾ ಇನ್ನಿತರೆ ಖಾಯಿಲೆ ಪ್ರಕರಣಗಳು ಹೆಚ್ಚಳಗೊಂಡು ನಾಗರಿಕರು ತೊಂದರೆಗೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಬಂದಿದ್ದಲ್ಲಿ, ಕರ್ತವ್ಯ ಲೋಪ ಎಸಗಿದ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು?

## ರಾಯಚೂರು ಜಿಲ್ಲೆಯಲ್ಲಿರುವ ಸಹಕಾರ ಸಂಘಗಳು ರೈತರಿಗೆ ನೀಡಿರುವ ಸಾಲದ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೪೧ (೨೭೧) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಯಚೂರು ಜಿಲ್ಲೆಯಲ್ಲಿರುವ ಸಹಕಾರ ಸಂಘಗಳ ಮುಖಾಂತರ ಎಷ್ಟು ಜನ ರೈತರಿಗೆ ಸಾಲವನ್ನು ನೀಡಲಾಗಿದೆ; ಅದರಲ್ಲಿ ಬಡ್ಡಿ ರಹಿತವಾಗಿ ನೀಡಿರುವ ಸಾಲದ ಮೊತ್ತ ಎಷ್ಟು; ಈ ಸಾಲ ಪಡೆದ ರೈತರುಗಳ ಸಂಖ್ಯೆ ಎಷ್ಟು;

(ಆ) ರಾಯಚೂರು ಜಿಲ್ಲೆಯಲ್ಲಿ ಸಹಕಾರ ಸಂಘಗಳ ಮುಖಾಂತರ ನೀಡಿರುವ ಸುಸ್ತಿ ಸಾಲದ ಮೊತ್ತ ಎಷ್ಟು; ಈ ಸುಸ್ತಿ ಸಾಲ ಹೊಂದಿರುವ ರೈತರ ಸಂಖ್ಯೆ ಎಷ್ಟು?

## ಅಪ್ರಾಪ್ತ ಹೆಣ್ಣು ಮಕ್ಕಳ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆಗಳ ಕುರಿತು

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨(೨೩೧) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಪ್ರಾಪ್ತ ಹೆಣ್ಣು ಮಕ್ಕಳ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರಗಳನ್ನು ನೀಡುವುದು)

(ಆ) ಅಪ್ರಾಪ್ತ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಿದ ಎಷ್ಟು ವ್ಯಕ್ತಿಗಳಿಗೆ ಕಾನೂನಾತ್ಮಕವಾಗಿ ಯಾವ ರೀತಿಯ ಶಿಕ್ಷೆ ವಿಧಿಸಲಾಗಿದೆ;

(ಇ) ಆರೋಪಿತ ಎಷ್ಟು ವ್ಯಕ್ತಿಗಳು ಆರೋಪದಿಂದ ವಿಮುಕ್ತಿಗೊಂಡಿರುತ್ತಾರೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಈ ರೀತಿ ಅಪರಾಧವೆಸಗಿದ ಎಷ್ಟು ವ್ಯಕ್ತಿಗಳನ್ನು ಯಾವ ಯಾವ ಕಾರಾಗೃಹಗಳಲ್ಲಿ ಇಡಲಾಗಿದೆ; (ಜಿಲ್ಲಾವಾರು ವಿವರಗಳನ್ನು ನೀಡುವುದು)

(ಉ) ಈ ರೀತಿ ಅಪರಾಧವೆಸಗುವ ವ್ಯಕ್ತಿಗಳನ್ನು ಘೋರವಾಗಿ ಶಿಕ್ಷಿಸಲು ಈಗಿರುವ ಕಾನೂನನ್ನು ತಿದ್ದುಪಡಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಊ) ಹಾಗಿದ್ದಲ್ಲಿ, ಪ್ರಸಕ್ತ ಅಧಿವೇಶನದಲ್ಲಿಯೇ ಈ ಕಾನೂನಿಗೆ ತಿದ್ದುಪಡಿ ತರಲು ಸರ್ಕಾರ ಕ್ರಮ ಕೈಗೊಳ್ಳುವುದೇ?

## ಗ್ರೂಪ್ ‘ಸಿ’ ಮತ್ತು ಗ್ರೂಪ್ ‘ಡಿ’ ಸರ್ಕಾರಿ ನೌಕರರ ಮಕ್ಕಳ ಉನ್ನತ ವ್ಯಾಸಂಗಕ್ಕೆ ವಿಶೇಷವಾಗಿ ಬ್ಯಾಂಕ್‌ನಿಂದ ಶಿಕ್ಷಣ ಸಾಲ ಕೊಡಿಸುವ ಯೋಜನೆ ಮಾಡುವ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೪೩ (೩೧೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗ್ರೂಪ್ ಸಿ ಮತ್ತು ಗ್ರೂಪ್ ಡಿ ಸರ್ಕಾರಿ ನೌಕರರ ಮಕ್ಕಳ ಉನ್ನತ ಶಿಕ್ಷಣಕ್ಕೆ ಸರ್ಕಾರವು ಯಾವ ರೀತಿಯ ಧನಸಹಾಯದ ಯೋಜನೆಯ ಪ್ರೋತ್ಸಾಹ ನೀಡುತ್ತಿದೆ;

(ಆ) ಕನಿಷ್ಠ ಹತ್ತು ವರ್ಷಗಳ ಸರ್ಕಾರಿ ಸೇವೆ ಸಲ್ಲಿಸಿದ ಗ್ರೂಪ್ ಸಿ ಮತ್ತು ಗ್ರೂಪ್ ಡಿ ನೌಕರರಿಗೆ, ಅವರು ಕನಿಷ್ಠ ಆದಾಯವನ್ನು ಪರಿಗಣಿಸದೆ, ಅವರ ಮಕ್ಕಳ ಪದವಿ ಹಾಗೂ ಉನ್ನತ ಶಿಕ್ಷಣಕ್ಕೆ ಬ್ಯಾಂಕುಗಳಿಂದ ಕಡಿಮೆ ಬಡ್ಡಿಯ ಶಿಕ್ಷಣ ಸಾಲ ಕೊಡಿಸಿ, ECS ಮೂಲಕ ವೇತನದಲ್ಲಿ ಸಾಲದ ಕಂತುಗಳನ್ನು ಕಡಿತಗೊಳಿಸುವ ವ್ಯವಸ್ಥೆಯನ್ನು ಮಾಡಲು ಸರ್ಕಾರವು ನಿಯಮ ರೂಪಿಸಲು ಮುಂದಾಗುವುದೇ;

(ಇ) ಇದರಿಂದ ಬ್ಯಾಂಕುಗಳಿಗೂ ಹಣ ಚಲಾವಣೆಯಾಗುವುದಲ್ಲದೆ, ಹಣವು ಬ್ಯಾಂಕುಗಳಿಗೆ ಯಾವುದೇ ವಿಳಂಬವಿಲ್ಲದೆ ಪಾವತಿಯಾಗುವುದಿಲ್ಲವೇ; ಈ ಸಂಬಂಧ ಸರ್ಕಾರದ ನಿಲುವೇನು;

(ಈ) ಸದರಿ ಯೋಜನೆಯನ್ನು ಈ ಬಾರಿ ಬಜೆಟ್‌ನಲ್ಲಿ ಪರಿಗಣಿಸಲಾಗುವುದೇ?

## ಮೈಸೂರು ನಗರದಲ್ಲಿ ಅಪರಾಧಗಳ ಸಂಖ್ಯೆಯಲ್ಲಿ ಹೆಚ್ಚಳ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೪ (೨೩೪) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೬ನೇ ಸಾಲಿನಲ್ಲಿ ಮೈಸೂರು ನಗರದಲ್ಲಿ ನಡೆದಿರುವ ಕೊಲೆ, ದರೋಡೆ, ಕಳ್ಳತನ ಇತ್ಯಾದಿ ಅಪರಾಧಗಳ ಸಂಖ್ಯೆ ಎಷ್ಟು; ಎಷ್ಟು ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚಿ ಅಪರಾಧಿಗಳನ್ನು ಬಂಧಿಸಲಾಗಿದೆ; ಉಳಿದ ಪ್ರಕರಣಗಳು ಯಾವ ಹಂತದಲ್ಲಿವೆ;

(ಆ) ನಗರದಲ್ಲಿ ವರ್ಷೇ ವರ್ಷೇ ಅಪರಾಧ ಪ್ರಕರಣಗಳು ಹಾಗೂ ರೌಡಿ ಚಟುವಟಿಕೆಗಳು ಹೆಚ್ಚಾಗುತ್ತಿದ್ದು, ಸಾರ್ವಜನಿಕರಲ್ಲಿ ಅಭದ್ರತೆಯ ವಾತಾವರಣ ಏರ್ಪಟ್ಟಿರುವುದು ಜನ ಸಾಮಾನ್ಯರಿಗೆ, ಪ್ರವಾಸಿಗರಿಗೆ ರಕ್ಷಣೆ ಇಲ್ಲದಿರುವ ಪರಿಸ್ಥಿತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಪರಾಧ ಚಟುವಟಿಕೆಗಳನ್ನು ಹತ್ತಿಕ್ಕಲು ಕೈಗೊಂಡಿರುವ ಕ್ರಮಗಳೇನು;

(ಇ) ಮೈಸೂರು ನಗರದಲ್ಲಿ ಕಳೆದ ವರ್ಷ ನಡೆದ ರಸ್ತೆ ಅಪಘಾತದಿಂದ ಮೃತಪಟ್ಟಿರುವವರು, ಗಾಯಗೊಂಡಿರುವವರ ಸಂಖ್ಯೆ ಎಷ್ಟು; ಅಗತ್ಯವಿರುವ ಕಡೆ ಸಿಗ್ನಲ್ ದೀಪ ಅಳವಡಿಸುವುದು ಸೇರಿದಂತೆ ಸಂಚಾರ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳು ಯಾವುವು; ಮೈಸೂರು ಮಾಲ್ ಮತ್ತು ಜೂಗಾರ್ಡನ್ ಬಳಿ ಸಂಚಾರ ದಟ್ಟಣೆ ಮತ್ತು ವಾಹನ ನಿಲುಗಡೆ ಮಿತಿಮೀರಿದ್ದು, ಅದರ ನಿಯಂತ್ರಣಕ್ಕೆ ನೋಪಾರ್ಕಿಂಗ್ ಜೋನ್ ಮಾಡುವುದಾಗಿ ಸಚಿವರು ಭರವಸೆ ನೀಡಿದ್ದರೂ, ಇದುವರೆಗೆ ಅದು ಜಾರಿಗೆ ಬರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

## CL-2 ವೈನ್ ಶಾಪ್ ತೆರೆಯಲು ಪರವಾನಗಿ ನೀಡುವ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೪೫ (೨೪೭) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ CL-2 ವೈನ್ ಶಾಪ್ ತೆರೆಯಲು ಮಂಜೂರಾತಿ ನೀಡಲಾಗುವುದೇ;

(ಆ) ಹಾಗಿದ್ದಲ್ಲಿ, ಯಾವಾಗ ಆದೇಶ ಹೊರಡಿಸಲಾಗುವುದು;

(ಇ) CL-2 ಪರವಾನಗಿ ನೀಡುವಾಗ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಅನುಪಾತದಂತೆ ನೀಡಲಾಗುವುದೇ?

**ಶ್ರೀನಿವಾಸ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ–975–1500 ಪ್ರತಿಗಳು (ಪಿ1)